# ಗೂಳಿ ಬಂತು ದಾರಿ ಬಿಡಿ



ಪ್ರವೀಣ ಕುಲಕರ್ಣಿ

ಸಾಮಾನ್ಯವಾಗಿ ಹಳ್ಳಿಗಳಲ್ಲಿ ಜನರು ವಾಹನ ಹೊರತುಪಡಿಸಿ ಬೇರೆ ಯಾವ ಪ್ರಾಣಿಗಳ ಮೇಲೆ ಸವಾರಿ ಮಾಡುವುದನ್ನು ನೀವು ಕಂಡಿದ್ದೀರಿ? ಕುದುರೆ ಸವಾರಿ ತುಂಬಾ ಫೇಮಸ್ಸು ಬಿಡಿ. ಕತ್ತೆ ಸವಾರರೂ ಇದ್ದಾರೆ. ರಾಜಸ್ಥಾನದ ಕಡೆಯಲ್ಲಾದರೆ ಒಂಟೆ ಸವಾರರು ಕಣ್ಣಿಗೆ ಬೀಳುತ್ತಾರೆ. ನಾವು ಚಿಕ್ಕವರಿದ್ದಾಗ ಊರೂರಿಗೆ ಬರುತ್ತಿದ್ದ ಕರಡಿ ಆಡಿಸುವವರು ನಮ್ಮನ್ನು ಕರಡಿ ಸವಾರರನ್ನಾಗಿ ಮಾಡಿದ್ದುಂಟು. ಎಮ್ಮೆಯ ಮೇಲೆ ಕುಳಿತ ಅಣ್ಣಾವ್ರು 'ಯಾರೇ ಕೂಗಾಡಲಿ, ಊರೇ ಹೋರಾಡಲಿ' ಎಂದು ಹಾಡಿದ್ದನ್ನು ಎಂದಿಗಾದರೂ ಮರೆಯಲಾದೀತೇ?

ನಮ್ಮ ನಾಗರಹೊಳೆ, ಬಂಡೀಪುರದ ಕಾಡಿನ ಕ್ಯಾಂಪುಗಳಲ್ಲಿ ಜಂಬೂಸವಾರಿಯೂ ನಡೆಯುವುದುಂಟು. ಪುರಾಣಗಳ ಮೇಲೆ ಕಣ್ಣಾಡಿಸಿದರೆ ಮೂಷಿಕ ವಾಹನ, ನವಿಲು ವಾಹನ, ಗರುಡ ವಾಹನ, ನಂದಿ ವಾಹನದ 'ಸವಾರ'ರು ಸಿಗುತ್ತಾರೆ. ಅಷ್ಟೇ ಏಕೆ, ಜಗನ್ಮಾತೆಯು ಹುಲಿಯನ್ನೇ ವಾಹನ ಮಾಡಿಕೊಂಡ ಕಥೆಯನ್ನು ನಾವು ಓದಿಲ್ಲವೇ? ಆದರೆ, ಫ್ರಾನ್ಸ್‌ನ ಈ ದ್ರಾಕ್ಷಿತೋಟಗಳ ತಾಣಕ್ಕೆ ಬನ್ನಿ. ಇಲ್ಲೊಬ್ಬ ಮಹಿಳೆ ಗೂಳಿಯನ್ನೇ ತನ್ನ ಸವಾರಿಗಾಗಿ ಬಳಸುವ 'ಪೌರುಷ' ಮೆರೆದಿದ್ದಾಳೆ. ಅಂದಹಾಗೆ, ಅವಳ ಹೆಸರು ಸಬಿನ್ ರೌಸ್ ಎಂದು. ಹಾಗೆಯೇ ತನ್ನ ಗೂಳಿಗೆ ಅವಳಿಟ್ಟ ಹೆಸರು ಆಸ್ಟನ್ ಎಂದು. ಒಂದೂವರೆ ಟನ್ ಭಾರದ ಈ ಗೂಳಿ, ಸಬಿನ್ ಅವರನ್ನು ಹೊತ್ತು ರಾಜಗಾಂಭೀರ್ಯದಿಂದ ಹೆಜ್ಜೆ ಹಾಕುವುದನ್ನು ನೋಡಲು ನಿತ್ಯ ಈ ದ್ರಾಕ್ಷಿತೋಟಗಳ ಮಣ್ಣಿನ ರಸ್ತೆಯಲ್ಲಿ ಜನರ ದಂಡೇ ನೆರೆಯುವುದಂತೆ.

ದ್ರಾಕ್ಷಿತೋಟಗಳ ಈ ರಸ್ತೆಯಲ್ಲಿ ಗೂಳಿ ಹೆಜ್ಜೆ ಹಾಕತೊಡಗಿದ ಮೇಲೆ ಇತ್ತ ಬರುವ ವಾಹನಗಳೆಲ್ಲ ರಸ್ತೆ ಪಕ್ಕಕ್ಕೆ ಬಂದು ಪಾರ್ಕ್ ಆಗುತ್ತವೆ. ಅದರ ಚಾಲಕರು ಸೋಜಿಗದಿಂದ ಮೊಬೈಲ್ ಹಿಡಿದು 'ಗೂಳಿ ಸವಾರಿ'ಯ ದೃಶ್ಯವನ್ನು ಸೆರೆ ಹಿಡಿಯುವಲ್ಲಿ ಬ್ಯುಸಿ ಆಗಿಬಿಡುತ್ತಾರೆ. ಆಸ್ಟನ್‌ನ ಪ್ರತಿಯೊಂದು ವಿಹಾರವೂ ಹೀಗೆ ಜನರನ್ನು ಆಕರ್ಷಿಸಿಯೇ ತೀರುತ್ತದೆ.

'ನಿಜ ಹೇಳಬೇಕೆಂದರೆ ಈ ಸವಾರಿಯನ್ನು ನಾನೇ ಆವಿಷ್ಕರಿಸಿದ್ದೇನಲ್ಲ. ಜಗತ್ತಿನ ಬೇರೆ ಬೇರೆ ಕಡೆಗಳ ವಿದ್ಯಮಾನಗಳತ್ತ ಒಮ್ಮೆ ನೋಡಿ. ಆನೆಗಳು, ಒಂಟೆಗಳು, ಆಸ್ಟ್ರಿಚ್‌ಗಳು... ಹೀಗೆ ಬೇರೆ ಬೇರೆ ಜೀವಿಗಳು ಮಾನವರಿಗೆ ಸವಾರಿಯ ಸಾಧನಗಳಾಗಿದ್ದಿದೆ' ಎಂದು ನಗುತ್ತಾರೆ ರೌಸ್. ಆಸ್ಟನ್, ಫ್ರಾನ್ಸ್‌ನಲ್ಲಿ 'ಲೋಕಲ್ ಸೆಲೆಬ್ರಿಟಿ'ಯಾಗಿ ತುಂಬಾ ದಿನಗಳಾಗಿದ್ದವು. ಆನ್‌ಲೈನ್ ಮೂಲಕ ಈಗ ಪ್ರಪಂಚದಾದ್ಯಂತ ಆತ ಸುದ್ದಿ ಮಾಡುತ್ತಿದ್ದಾನೆ. ಎಲ್ಲರೂ ತನ್ನತ್ತ ಕಣ್ಣರಳಿಸಿ ನೋಡುವಂತೆಯೂ ಕಂಗೊಳಿಸುತ್ತಿದ್ದಾನೆ.

ರೌಸ್ ಅವರ ಪತಿ ಯಾನಿಕ್ ಕ್ರಿಸ್ಟೋಫರ್ ಅವರು ಆಸ್ಟಿನ್‌ನ ಸೋಷಿಯಲ್ ಮೀಡಿಯಾ ಮ್ಯಾನೇಜರ್ ಆಗಿದ್ದಾರೆ. ಆಸ್ಟಿನ್‌ಗೆ ಇದುವರೆಗೆ 62 ಸಾವಿರ ಟಿಕ್ ಟಾಕ್ ಅಭಿಮಾನಿಗಳು, 90 ಸಾವಿರ ಯೂಟ್ಯೂಬ್ ಚಂದಾದಾರರು ಇದ್ದಾರೆ.

ಗೂಳಿಯ ಈಗಿನ ಸವಾರಿಯ ದೃಶ್ಯವೇನೋ ಎಲ್ಲರನ್ನೂ ಹರ್ಷಚಿತ್ತರನ್ನಾಗಿ ಮಾಡುತ್ತದೆ. ಆದರೆ, ಈ ಸವಾರಿ ಕಥೆ ರೌಸ್ ಅವರ ಒಂದು ರೇಸ್ ಕುದುರೆ ಸಾವಿನೊಂದಿಗೆ ಶುರುವಾಗುತ್ತದೆ.

'ಪ್ರತಿಯೊಬ್ಬ ಸವಾರನಿಗೂ ತನ್ನ ಕುದುರೆಯೊಂದಿಗೆ ವಿಶೇಷ ಸಂಬಂಧ ಇರುತ್ತದೆ. ನನ್ನ ಕುದುರೆ ಅಸುನೀಗಿದ ಮೇಲೆ ಬೇರೆ ಕುದುರೆಯನ್ನು ಪಡೆಯಲು ನನಗೆ ಮನಸ್ಸೇ ಆಗಲಿಲ್ಲ' ಎಂದು ರೌಸ್ ವಿವರಿಸುತ್ತಾರೆ.

ರೌಸ್ ವಾಸಿಸುವ ಸುತ್ತಲಿನ ಪ್ರದೇಶ ಹೈನುಗಾರಿಕೆಗೆ ಪ್ರಸಿದ್ಧವಾದುದು. ತಮ್ಮ ಸಾಂಗತ್ಯಕ್ಕೆ ದೊಡ್ಡ ಪ್ರಾಣಿಯೊಂದು ಬೇಕು ಎಂದೆನಿಸಿದಾಗ ಆಕೆ ಅಲ್ಲಿದ್ದ ರೈತರೊಬ್ಬರನ್ನು ಭೇಟಿ ಮಾಡಿದರು. ಅವರಿಂದ ಒಂದು ಹಸುವನ್ನು ಖರೀದಿಸಿ ತಂದರು. ಅದು ಗಂಡು ಕರುವೊಂದಕ್ಕೆ ಜನ್ಮ ನೀಡಿದಾಗ ರೌಸ್ ಆನಂದಕ್ಕೆ ಪಾರವೇ ಇರಲಿಲ್ಲ. 'ಅದರ ಮೈ ತುರಿಸುತ್ತಾ ಹೋದಂತೆ ಅದಕ್ಕೆ ಖುಷಿಯಾಗಿ ತನ್ನ ಪ್ರೀತಿಯನ್ನೂ ಅದು ತೋರಿಸುತ್ತಿತ್ತು. ಸಂಬಂಧ ಹೀಗೆ ಬೆಳೆಯಿತು' ಎಂದು ಆಕೆ ಹೇಳುತ್ತಾರೆ.

ಬೆಕ್ಕುಗಳಿಗೆ ತರಬೇತಿ ನೀಡಿ ಗೊತ್ತಿದ್ದ ರೌಸ್‌ಗೆ ಕರುವಿಗೆ ತರಬೇತಿ ನೀಡುವುದು ಕಷ್ಟವಾಗಲಿಲ್ಲವಂತೆ. 'ಸವಾರಿ ಆರಂಭ ಮಾಡುವುದು ಅಷ್ಟು ಸುಲಭವೇನೂ ಆಗಿರಲಿಲ್ಲ. ಮೊದಲ ಮೂರು ತಿಂಗಳಲ್ಲಿ ನಾನು 38 ಸಲ ಅದರ ಮೇಲಿಂದ ಬಿದ್ದಿದ್ದೆ. ಆದರೆ, ಮುಂದಿನ ಒಂಬತ್ತು ವರ್ಷಗಳಲ್ಲಿ ಸಂಪೂರ್ಣ ಚಿತ್ರಣವೇ ಬದಲಾಗಿ ಹೋಯಿತು. ಈ ಭಾಗದ ಜನರಿಗೆ ಗೂಳಿ ಸವಾರಿ ಒಂದು ರೋಚಕ ವಿದ್ಯಮಾನವಾಗಿ ಕಂಗೊಳಿಸಿತು' ಎಂದು ವಿವರಿಸುತ್ತಾರೆ.

ಗೂಳಿ ಸವಾರಿ ಕಲಿಸಿಕೊಡಲು 'ಕ್ಲಾಸ್' ತೆಗೆದುಕೊಳ್ಳುವಂತೆ ಈಗ ಜನ ದುಂಬಾಲು ಬೀಳುತ್ತಿದ್ದಾರೆ. ಅವರಿಗೆ ಪ್ರಾಣಿಗಳ ಪ್ರೀತಿ ಹೇಗೆ ಸಂಪಾದಿಸುವುದು ಎಂಬುದರ ಟಿಪ್ಸ್ ಕೊಟ್ಟು ಕಳಿಸುತ್ತಾರೆ ರೌಸ್. ಸಿನಿಮಾಗಳಲ್ಲೂ ಆಸ್ಟಿನ್ ಕಾಣಿಸಿಕೊಂಡಿದ್ದಾನೆ. ಜಪಾನ್‌ನಲ್ಲೂ ಆತ ಭಾರೀ ಜನಪ್ರಿಯನಂತೆ. ಜಾಹೀರಾತು ಬ್ರ್ಯಾಂಡ್‌ಗಳಲ್ಲೂ ಕಾಣಿಸಿಕೊಂಡಿದ್ದಾನೆ. ಯಾವುದರಿಂದಲೂ ತಲೆ ತಿರುಗಿಸಿಕೊಳ್ಳದೆ ತನ್ನ ಒಡತಿಯನ್ನು ಯಥಾಪ್ರಕಾರ ನಿತ್ಯ ಬೆನ್ನಮೇಲೆ ಕೂರಿಸಿಕೊಂಡು ಹೆಜ್ಜೆ ಹಾಕುತ್ತಿದ್ದಾನೆ.

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65